# ಇಸಾಬೆಲ್ಲಳ ಪ್ರೇಮಕತೆ

ಒಂದು ವಾರದಿಂದ ಇಸಾಬೆಲ್ಲಾ ಅವನನ್ನು ಗಮನಿಸುತಿದ್ದಳು, ಅವನೊಬ್ಬ ಚಿತ್ರ ಕಲಾವಿದ-ಅವನ ಜಡ್ಡುಗಟ್ಟಿದ ಕೊಳೆಯಾದ ನಿಲುವಂಗಿಯ ಮೇಲಿನ ಬಣ್ಣದ ಕಲೆಗಳು, ಅವನ ಕುರುಚಲು ಗಡ್ಡ, ಬೆರಳ ತುದಿಯ ಚಾರ್‌ಕೋಲ್ ಕಲೆಗಳು, ಕೆಲವೊಮ್ಮೆ ಅವನು ತೂಗುಹಾಕಿಕೊಂಡುಬರುತ್ತಿದ್ದ ಅವನ ನಿಲುವಂಗಿಯಷ್ಟೇ ವರ್ಣಾವೃತವಾದ 'ಳೆಯ ಚರ್ಮದ ಬ್ಯಾಗು ಅದನ್ನು ಸಾರಿ ಹೇಳಿದ್ದವು. ಎಲ್ಲ ಕಲಾವಿದರಂತೆ ಅವನು ಕನಸನರಸಿ ಪ್ಯಾರೀಸಿಗೆ ಬಂದಿದ್ದ ಅನಿಸುತ್ತೆ, ಈಗೆರಡು ವಾರದಿಂದ ತಪ್ಪದೇ ಬೇಕರಿಗೆ ಬರುತ್ತಿರುವವನು ಪ್ರತೀಸಲವೂ ಮೂರುದಿನ ಹಳೆಯದಾದ ಒಣ ಬ್ರೆಡ್ಡನ್ನು ಕೇಳಿ ಖರೀದಿಸುತ್ತಾನೆ; ಹೆಚ್ಚು ಮಾತಿಲ್ಲ; ಸದಾ ಪರಧ್ಯಾನದಲ್ಲಿರುವಂತೆ, ಮುಖ ಗಂಟುಹಾಕಿಕೊಂಡಿರುತ್ತಾನೆ, ಇಸಾಬೆಲ್ಲ ಇವನ ಪ್ರೇಮಕ್ಕೆ ಸಿಲುಕಿದ್ದಾಳೆ!

ಯುದ್ಧ ಶುರುವಾದ ಮೇಲೆ ಎಲ್ಲರ ಜೀವನ ತುಟ್ಟಿಯಾಗಿದೆ; ಪ್ರಪಂಚದೆಲ್ಲ ಕಲೆಗಳ ರಾಜಧಾನಿಯಾಗಿದ್ದ ಪ್ಯಾರೀಸ್ ಇಂದು ಬಡತನದ ಗೂಡಾಗಿದೆ; ಕಲೆಗೆ ಈಗ ಪ್ರೋತ್ಸಾಹವಿಲ್ಲ, ಕೊಂಡುಕೊಳ್ಳುವರಿಲ್ಲ; ಚಿತ್ರಪ್ರದರ್ಶನಗಳಂತೂ ಇಲ್ಲವೇ ಇಲ್ಲ; ಕನಸನರಸಿ ಬಂದ ಕಲಾವಿದರೆಲ್ಲ ಈಗ ಬಾಯಿಬಾಯಿ ಬಿಡುತಿದ್ದಾರೆ; ಪ್ಯಾರೀಸಿನ ಕೊಳೆಗೇರಿಗಳಲ್ಲಿ, ಅಗ್ಗದ ಬೀದಿಗಳಲ್ಲಿ ಕೂಡ ಅವರೇ ತುಂಬಿಕೊಂಡಿದ್ದಾರೆ; ಪ್ರತೀ ಮನೆಯ ಬೆಳಕೇ ಕಾಣದ ಮುರುಕು ಕೊಠಡಿ, ಬಾಲ್ಕನಿಗಳೆಲ್ಲವನ್ನೂ ವಾರದ ಬಾಡಿಗೆಗೆ ತೆಗೆದುಕೊಂಡಿದ್ದಾರೆ; ದುಡ್ಡುಕೊಟ್ಟು ಚಿತ್ರ ಬರೆಸಿಕೊಳ್ಳುವವರಿಗಾಗಿ ಕಾಯುತ್ತ,ವಿಟಪುರುಷರಿಗಾಗಿ ಕಾಯುತ್ತಿರುವ ನಿತ್ಯಕನ್ನಿಕೆಯರಂತೆ ಕಾಣುತ್ತಾರೆ; ಕುಡಿತ, ಒಳಜಗಳ, ಕೊಲೆಗಳಿಂದ ಪ್ಯಾರೀಸಿನ ನಾಗರಿಕರಿಗೆ ತಲೆನೋವಾಗಿದ್ದಾರೆ; ಈ ಗಲ್ಲಿಗಳೊಳಕ್ಕೆ ಪೋಲೀಸೂ ಬರುವುದಿಲ್ಲ, ಅಂತಹ ಇರುಕು ಗಲ್ಲಿಯೊಂದರ ತಿರುವಿನಲ್ಲಿ ಇಸಾಬೆಲ್ಲಳ ಬೇಕರಿ ಇದೆ.

ಇವರಪ್ಪ ಇವರನ್ನು ತೊರೆದು ಇನ್ನೊಂದು ಹೆಣ್ಣಿನ ಜೊತೆ ಹೋದ ಮೇಲೆ, ಇವರಮ್ಮ ಕಾಸಿಗೆ ಕಾಸು ಸೇರಿಸಿ ಗಲ್ಲಿಯ ತಿರುವಿನ ಈ ಮನೆಯನ್ನು ಖರೀದಿಸಿದ್ದಳು, ಮನೆಯ ಮುಂದಿನ ಸಣ್ಣ ಸಿಟೌಟನ್ನು ಬೇಕರಿಯಾಗಿ ಮಾಡಿಕೊಂಡಿದ್ದಳು. ಆಕೆ ಬದುಕಿದ್ದಾಗ, ವ್ಯಾಪಾರ ಚೆನ್ನಾಗಿದ್ದ ಕಾಲದಲ್ಲಿ ಬೇಕರಿಯ ಕೆಲಸಕ್ಕೆ ಒಬ್ಬ ಸಹಾಯಕಿಯೂ ಇದ್ದಳು. ಆದರೆ ಹತ್ತು ವರ್ಷದ ಹಿಂದೆ ಅಮ್ಮ ತೀರಿಕೊಂಡಾಗ ಇಸಾಬೆಲ್ಲಾಳ ದುರ್ದೆಶೆ ಶುರುವಾಯಿತು. ಈಗ ಈ ಬೇಕರಿಯನ್ನು ಯಾರೂ ಗುರುತಿಸುವುದಿಲ್ಲ. ಯುದ್ಧ ಶುರುವಾದ ಮೇಲೆ, ಅಕ್ಕಪಕ್ಕದ ಮನೆಗಳಿಗೆಲ್ಲ ಹಸಿವೆಯೇ ಕಾಣದ ದೂರ ದೇಶಗಳ ದುಡ್ಡಿಲ್ಲದ ಕಲಾವಿದರು ಬಂದು ಸೇರಿಕೊಂಡ ಮೇಲಂತೂ ಇವಳ ಬೇಕರಿಯಲ್ಲಿ, ಅತೀ ಅಗ್ಗದ ಎರಡು ಮೂರು ತರದ ಬ್ರೆಡ್, ಬನ್ನು ಬಿಟ್ಟರೆ ಬೇರೇನೂ ತಯಾರಾಗುವುದಿಲ್ಲ; ಬಿಕರಿಯಾಗುವುದಿಲ್ಲ.

ಈಗ ವ್ಯಾಪಾರ ಕಡಿಮೆಯಿದ್ದರೂ ಇವಳ ಅಂಗಡಿಯ ಗಿರಾಕಿಗಳಲ್ಲಿ ಕೆಲವು ಕಲಾವಿದರೂ ಇದ್ದಾರೆ. ಸಾಮಾನ್ಯವಾಗಿ ಬರುವ ಕಲಾವಿದರೆಲ್ಲ ತುಂಬ ಚೌಕಾಸಿ ಬುದ್ಧಿಯವರು. ಇವಳು ಕತ್ತರಿಸಿದ ಬ್ರೆಡ್‌ನ ಭಾಗ ಕಡಿಮೆಯಿದೆ; ಬೆಣ್ಣೆ ವಾಸನೆಯಿದೆ ಹೀಗೇ ಹತ್ತಾರು ತರಲೆಗಳು, ಆದರೆ ಇವನು ಮಾತ್ರ ಸದಾ ನಿರ್ಲಿಪ್ತ. ಕೆಲವೊಮ್ಮೆ, ಅವನು ಕೇಳುವ ಮೂರುದಿನದ ಒಣಬ್ರೆಡ್ಡಿನೊಳಕ್ಕೆ ಒಂದು ಚಮಚೆಯಷ್ಟು ಬೆಣ್ಣೆಯನ್ನೊರೆದುಬಿಡಲೇ ಅಂತ ಅವಳಿಗೆ ಅನಿಸಿದೆ, ಅವನನ್ನು ಬೇರೆಯೇನಾದರೂ ಕೇಳಲು ಇವಳಿಗೆ ಭಯ. ಆದರೂ ಮೊನ್ನೆ ಕೇಳಿಯೇ ಬಿಟ್ಟಿದ್ದಳು, 'ಇವತ್ತು ಹವಾಮಾನ ಒಳ್ಳೇದಿದೆ ಅಲ್ವೇ?', ಅವನು ನಿದ್ದೆಯಿಂದೆದ್ದವನಂತೆ 'ಹಾಂ ಹೌದು!' ಎಂದು ಕೊಟ್ಟ ಬ್ರೆಡ್ಡಿನ ಪೊಟ್ಟಣವನ್ನೆತ್ತಿಕೊಂಡು ಹೋಗಿಯೇ ಬಿಟ್ಟಿದ್ದ! ಇಸಾಬೆಲ್ಲಳಿಗೆ ಅವನ ತುಟಿಯಂಚಿನಲ್ಲಿ ನಗುವಿನಂತಹದೇನೋ ಕಂಡಂತಾಯಿತು!.

ಅಮ್ಮ ಇದ್ದಾಗಲೇ ಇವಳ ವಯಸ್ಸು ಇಪ್ಪತ್ತೈದನ್ನು ದಾಟಿತ್ತು; ಅಮ್ಮ ಅದೊಂದು ಕೊರಗಿನೊಂದಿಗೇ ಸತ್ತು ಹೋದಳು, ಸ್ನೇಹಿತರೂಂತ ಇವಳು ಕಂಡಿದ್ದು ಕೂಡ ಹದಿನೈದು ವರ್ಷಗಳ ಹಿಂದೆಯೇ. ಯಾವ ಗಂಡಸೂ ಇವಳನ್ನು ಮದುವೆಯಾಗುವ ಇಚ್ಛೆ ತೋರಲಿಲ್ಲ, ಯುದ್ಧ ಶುರುವಾದ ಮೇಲಂತೂ ಎಲ್ಲವನ್ನೂ ಮರೆತು ಇವಳು ಬದುಕಿದಳು, ಯಾಕೆ ಬದುಕಬೇಕೆಂದು ಅರ್ಥವಾಗದಿದ್ದರೂ. ಆಗೊಮ್ಮೆ ಈಗೊಮ್ಮೆ ಬಾಕಿ ವಸೂಲಿಗೆ ಬರುವ ಪಕ್ಕದ ಗಲ್ಲಿಯ ಬೆಣ್ಣೆ ಮಾರಾಟಗಾರ ಪ್ಯಾಟ್ರಿ ಕೂಡ ಆಗೊಮ್ಮೆ ಈಗೊಮ್ಮೆ ಮಾತಿನ ಕಿಡಿ ಹಾರಿಸುತ್ತಾನೆ, ತನ್ನ ಬೆಣ್ಣೆಯಂಗಡಿ-ಇವಳ ಬೇಕರಿಯೆರಡನ್ನೂ ಸೇರಿಸಿದರೆ ಒಳ್ಳೇ ವ್ಯಾಪಾರ ಮಾಡಬಹುದು ಅನ್ನುತ್ತಾನೆ, ಆದರೆ ಅವನ ವ್ಯಾಪಾರಿ ಬುದ್ಧಿ ಇಸಾಬೆಲ್ಲಳಿಗೆ ಇಷ್ಟವಾಗುವುದಿಲ್ಲ; ಹಾಗಾಗಿ ಅವನ ಈ ಮಾತುಗಳಿಗೆಲ್ಲ ಇವಳು ನಿರ್ಲಿಪ್ತೆ. ಅಂಥವಳಿಗೆ ಈಗ ಪ್ರೇಮವಾಗಿದೆ!

ಈ ಕಲಾವಿದ ಬೇಕರಿಗೆ ಬರತೊಡಗಿದ ಮೇಲೆ ಇಸಾಬೆಲ್ಲ ತನ್ನ ಉಡುಗೆ-ತೊಡುಗೆಯ ಕಡೆ ಗಮನ ಕೊಡತೊಡಗಿದಳು; ಇದ್ದ ಹಳೆಯ ನಾಲ್ಕು ದಿರಿಸುಗಳನ್ನು ಒಪ್ಪವಾಗಿ ಧರಿಸತೊಡಗಿದಳು; ದಿನಾಲೂ ಕರೆಗಟ್ಟಿದ ಕನ್ನಡಿಯ ಮುಂದೆ ನಿಂತು ಗಂಟೆಗಟ್ಟಲೆ ತಲೆ ಬಾಚಿಕೊಳ್ಳಲಾರಂಭಿಸಿದಳು, ಎಲ್ಲಕ್ಕಿಂತ ಮುಖ್ಯವಾಗಿ ಅಟ್ಟದ ಮೇಲೆ ವರ್ಷಗಳ ಹಿಂದೆ ಮುಚ್ಚಿಟ್ಟಿದ್ದ ಆ ಕರಂಡಕವನ್ನು ತೆಗೆದು, ಅದರಲ್ಲಿ ಲೇಪವನ್ನು ತಯಾರು ಮಾಡಿ ಮುಖಕ್ಕೆ ಹಚ್ಚಿ ಕೊಳ್ಳಲಾರಂಭಿಸಿದಳು. ಅವಳು ಇನ್ನೂ ಯುವತಿಯಾಗಿದ್ದಾಗ ಅಮ್ಮ ಉಪಯೋಗಿಸುತ್ತಿದ್ದ ಮಿಶ್ರಣದ ಜಾಡಿ ಅದು. ಮನೆಯಲ್ಲೇ ಇರುವ ಗೋಧಿ ಹಿಟ್ಟು ಹಾಲು ಮತ್ತು ಕರಂಡಕದ ಜೊತೆಗಿದ್ದ ಕೆಲವು ಪುಡಿಗಳನ್ನು ಸೇರಿಸಿ ಮುಖಕ್ಕೆ ಹಚ್ಚಿಕೊಂಡರೆ ಮುಖದ ಸುಕ್ಕುಗಳೆಲ್ಲ

ಒರೆಸಿಹೋಗುತ್ತಿದ್ದವಂತೆ. ಅದನ್ನು ತಯಾರುಮಾಡಿ ಹಚ್ಚಿಕೊಳ್ಳಲೋಸುಗವೇ ಬೆಳಗಿನ ಹೊತ್ತು ಬೇಗನೇ ಏಳಲಾರಂಭಿಸಿದಳು, ಎರಡು ಮೂರು ದಿನಗಳ ನಂತರ ಬೇಸರ ಬಂದು, ಒಂದು ಕೈಪಾತ್ರೆಯ ತುಂಬ ಹದಿನೈದು ದಿನಗಳಿಗಾಗುವಷ್ಟು ಮಿಶ್ರಣ ಕದರಿಟ್ಟಳು. ಮತ್ತು ಮಿಶ್ರಣದ ಲೇಪನದಿಂದ ದಿನೇ ದಿನೇ ಮುಖದ ಸುಕ್ಕುಗಳು ಕಡಿಮೆಯಾಗುತ್ತಿದೆಯೆನಿಸಿ ಇಸಾಬೆಲ್ಲ ಉಲ್ಲಸಿತಳಾದಳು.

ಆ ದಿನವೂ ಬೆಳಿಗ್ಗೆ ಬೇಗನೇ ಎದ್ದು ಮಿಶ್ರಣ ಹಚ್ಚಿಕೊಂಡು ತಲೆಬಾಚಿಕೊಂಡು, ಮುಖ ತೊಳೆದುಕೊಂಡು ಬೇಕರಿಯ ಬಾಗಿಲು ತೆಗೆದಳು ಇಸಾಬೆಲ್ಲ. ಇವತ್ತು ತನ್ನ ಜೀವನದಲ್ಲಿ ವಿಶೇಷವೊಂದು ಘಟಿಸುತ್ತದೆ ಅನಿಸಿತು. ಸೂರ್ಯ ನಡುಹಾದಿಯಲ್ಲಿರುವಾಗ ಬಂದೇ ಬಿಟ್ಟನಲ್ಲ ಅವನು! ಬಂದವನೇ ಅದೇ ನೂರೈವತ್ತು ಗ್ರಾಮ್ (ಮೂರು ದಿನದ) ಒಣಬ್ರೆಡ್ ಕೇಳಿದ. ಇವಳು ಬ್ರೆಡ್ ಕತ್ತರಿಸಿ, ಪೊಟ್ಟಣಕಟ್ಟುವ ಮೊದಲು ಮೆಲ್ಲನೇ ಬಾಗಿ ಬೆಣ್ಣೆಯ ಜಾಡಿಯಲ್ಲಿದ್ದ ಚಾಕುವಿನಿಂದ ಸಾಕಷ್ಟು ಪ್ರಮಾಣದ ಬೆಣ್ಣೆ ತೆಗೆದು ಬ್ರೆಡ್ಡಿನ ಸೀಳಿನೊಳಕ್ಕೆ ಒರೆದಳು. ನಂತರ ಪೊಟ್ಟಣವನ್ನು ಕಟ್ಟಿ ಅವನ ಕೈಗಿಟ್ಟಳು. ಅವಳ ಕೈಗಳು ನಡುಗುತಿದ್ದವು. ಅವನು 'ಧನ್ಯವಾದ' ಹೇಳಿ, ಗಲ್ಲಾದ ಮೇಲೆ ಚಿಲ್ಲರೆಯೊಗೆದು ಹೋಗೇ ಬಿಟ್ಟ. ಅವನು ಹೋದ ದಾರಿಯನ್ನೇ ನೋಡುತ್ತ ನಿಂತಳು ಇಸಾಬೆಲ್ಲ.

ಅವನು ಕಾಣದಾದಾಗ ಬೇಕರಿಯ ಬಾಗಿಲಿಳಿಸಿ, ಮನೆಯೊಳಕ್ಕೆ ಹೋಗಿ, ಮಿಶ್ರಣದ ಜಾಡಿಯಲ್ಲಿದ್ದ ಮಿಶ್ರಣವನ್ನು ತನ್ನ ಮುಖಕ್ಕೆಲ್ಲ ಹಚ್ಚಿಕೊಂಡಳು, ಕಟ್ಟಿದ್ದ ತಲೆಗೂದಲನ್ನು ಹರವಿ ಬಾಚಿಕೊಂಡಳು, ಊಟಕ್ಕೆ ಅಂತ ಕೂತಳಾದರೂ ಒಂದು ತುತ್ತು ಕೂಡ ಗಂಟಲಿನಲ್ಲಿಳಿಯಲಿಲ್ಲ. ನಂತರ ಕನ್ನಡಿಯ ಮುಂದೆ ನಿಂತು ಮಿಶ್ರಣ ಒಣಗಿರುವುದನ್ನು ಖಚಿತ ಪಡಿಸಿಕೊಂಡು, ಅದೇ ಮುರುಕಲು ಬಚ್ಚಲಲ್ಲಿ ನಿಂತು ಮಿಂದಳು, ಅವನು ವಾಪಸ್ಸು ಬಂದೇ ಬರುತ್ತಾನೆ ಅನಿಸುತ್ತಿತ್ತು. ಮೊನ್ನೆ ಒಗೆದಿಟ್ಟಿದ್ದ ಬಟ್ಟೆ ತೊಟ್ಟುಕೊಂಡಳು, ಅದೇ ಕನ್ನಡಿಯ ಮುಂದೆ ನಿಂತು ಮುಖದ ಸುಕ್ಕುಗಳನ್ನು ನೋಡಿಕೊಂಡಳು, ತೊಟ್ಟಬಟ್ಟೆಯೆಲ್ಲಾದರೂ ಜೋಲು ಬಿದ್ದಿದೆಯಾ, ಪರೀಕ್ಷಿಸಿದಳು. ನಂತರ ಬಂದು ಬೇಕರಿಯ ಬಾಗಿಲು ತೆಗೆದು, ಕಾಯುತ್ತ ನಿಂತಳು.

ಬಂದವನು ನನ್ನ ಬರಸೆಳೆದು ಅಪ್ಪಿ ಮುತ್ತನಿಡಬಹುದೇ? ಆವಳ ಯೋಚನೆಗೆ ಅವಳಿಗೇ ನಗುಬಂತು. ಹಾಗೆಲ್ಲ ಇರಲಿಕ್ಕಿಲ್ಲ, ಬಂದವನೇ ವಿನಯದಿಂದ ಬೆಣ್ಣೆ ಹಾಕಿದ ಕಾರಣ ಕೇಳುತ್ತಾನೆ, ಏನು ಹೇಳಬೇಕು ನಾನು? ಹೊರಹೋಗಲು ಕರೆಯುತ್ತಾನೇನೋ? ಏನು ಹೇಳಬೇಕು ನಾನು?... ಯೋಚಿಸುತ್ತಿರುವಂತೆಯೇ ಇಳಿಬಿಸಿಲಾಯಿತು. ಯಾಕೋ ಇಸಾಬೆಲ್ಲಳಿಗೆ ಭಯವಾಗತೊಡಗಿತು, ಅವನು ಬರುವುದಿಲ್ಲವೇನೋ?

ಹಾಗೆ ಯೋಚಿಸುತ್ತಿರುವಾಗಲೇ ಬೀದಿಯ ಮೂಲೆಯಲ್ಲಿ ಅವನು ಬರುತ್ತಿರುವುದು ಕಾಣಿಸಿತು, ಅವನ ಹಿಂದೆ ಯಾರೋ ಓಡಿಬರುತ್ತಿದ್ದರು, ಇಸಾಬೆಲ್ಲ ನಖಶಿಖಾಂತ ನಡುಗತೊಡಗಿದಳು, ಅವಳ ಬಾಯಿ ಒಣಗಿಹೋಯಿತು. ಅವನು ದಾಪುಗಾಲಿಟ್ಟುಕೊಂಡು ಬೇಕರಿಯ ಮುಂದಕ್ಕೆ ಬಂದೇ ಬಿಟ್ಟ; ಇವಳು ನಗುವ ಪ್ರಯತ್ನ ಮಾಡಿದಳು; ಅವನು ಬೇಕರಿಹೊಕ್ಕವನೇ ಅವಳ ಕುತ್ತಿಗೆಗೆ ಕೈಹಾಕಿ ಗೋಡೆಗೆ ಒತ್ತಿಹಿಡಿದುಬಿಟ್ಟ. ಅವನ ಹುಬ್ಬುಗಂಟಿಕ್ಕಿಕೊಂಡಿದ್ದವು, ಅವನ ಮೈ ಸಿಟ್ಟಿನಿಂದ ಅದುರುತ್ತಿತ್ತು. 'ನನ್ನ ಜೀವನವನ್ನೇ ಹಾಳುಮಾಡಿದ ರಾಕ್ಷಸಿ ನೀನು! ಪಿಶಾಚಿ ಹೆಂಗಸೇ ನೀನಿವತ್ತು ಸಾಯಲೇ ಬೇಕು!' ಅವನ ಗಡುಸು ಬೈಗುಳುಗಳಿಂದ ಇಸಾಬೆಲ್ಲಳ ತಲೆ ತಿರುಗಿದಂತಾಯಿತು. ಅವನು ಒತ್ತಿಹಿಡಿದುದರಿಂದ ಉಸಿರು ಸಿಕ್ಕಿಕೊಂಡು ಗಂಟಲುಬ್ಬಿ ಬಂದು ಕಣ್ಣುಗಳು ಕತ್ತಲಿಟ್ಟವು. ಅಷ್ಟರಲ್ಲಿ ಅವನ ಹಿಂದೆ ಓಡಿಬಂದವನು(ಆವನ ಸ್ನೇಹಿತನಿರಬೇಕು), ಅವನನ್ನು ಹಿಡಿದೆಳೆದ, 'ಆಕೆಯನ್ನು ಬಿಟ್ಟುಬಿಡು'. ಆದರೆ ಅವನು ಇವಳನ್ನು ಬಿಡಲೊಲ್ಲ. ಬಲವಂತವಾಗಿ ಅವನ ಸ್ನೇಹಿತ ಅವನನ್ನು ಎಳೆದು, ಇವಳಿಂದ ಬಿಡಿಸಿ ಬೇಕರಿಯಿಂದ ಹೊರತಳ್ಳಿದ. ಆ ಕಲಾವಿದ ಇನ್ನೂ ಶಪಿಸುತ್ತಲೇ ಇದ್ದ. 'ನೀನು ಉದ್ದಾರವಾಗೊಲ್ಲ, ನಾಯಿಮುಖದವಳೇ..' ಈಗವನು ಅಳುತ್ತಿದ್ದ, ಅಳುತ್ತ, ಶಪಿಸುತ್ತ ಹೊರಟುಹೋದ. ಇಸಾಬೆಲ್ಲ ದಿಘ್ಮೂಢಳಾಗಿದ್ದಳು. ಕಲಾವಿದನ ಸ್ನೇಹಿತ ಇವಳನ್ನು ಕುರ್ಚಿಯ ಮೇಲೆ ಕುಳ್ಳಿರಿಸಿದ. ಅವನು ಹೇಳಿದ್ದಿಷ್ಟು, 'ಪ್ಯಾರಿಸಿನ ದೊಡ್ಡ ಭೂಮಾಲೀಕನೊಬ್ಬ ಹಲವಾರು ಕಲಾವಿದರಿಗೆ ಆಮಂತ್ರಣಕೊಟ್ಟು, ಪ್ಯಾರಿಸಿನ ವಿವಿಧ ಪ್ರೇಕ್ಷಣೀಯ ಸ್ಥಳಗಳ ಚಾರ್‌ಕೋಲ್ ಚಿತ್ರಗಳನ್ನು ಮಾಡಿಕೊಡಲು ಹೇಳಿದ್ದ. ಈ ಕಲಾವಿದ ಎಲ್ಲರಿಗೂ ಸವಾಲಾಗಿದ್ದ ಪ್ಯಾರಿಸಿನ ದೊಡ್ಡ ಕಟ್ಟೋಣವೊಂದರ ಚಿತ್ರವೊಂದನ್ನು ಒಂದು ತಿಂಗಳಿನಿಂದ ಮೂಡಿಸುತ್ತಿದ್ದ. ನಾಳೆಯೇ ಅದಕ್ಕೆ ಕೊನೆಯ ದಿನ. ಅದರಿಂದ ಕಲಾವಿದನಿಗೆ ಕಡಿಮೆಯೆಂದರೂ ಸಾವಿರ ರೂಪಾಯಿ ಇನಾಮು ಬರುತ್ತಿತ್ತು. ಆದರೆ ಇವಳು ಕೊಟ್ಟ ಬೆಣ್ಣೆ ಹಚ್ಚಿದ ಬ್ರೆಡ್ಡಿನಿಂದಾಗಿ ಪೂರ್ಣಗೊಂಡಿದ್ದ ಚಿತ್ರ ಕೆಟ್ಟುಹೋಯಿತು. ಯಾಕೆಂದರೆ ಅವನು ಇಸಾಬೆಲ್ಲಳ ಬೇಕರಿಯ ಮೂರುದಿನದ ಹಳೆಯ ಬ್ರೆಡ್ಡನ್ನು ಚಾರ್‌ಕೋಲ್ ಚಿತ್ರಕ್ಕೆ ಶೇಡಿಂಗ್ ಕೊಡುವುದಕ್ಕಾಗಿ ಉಜ್ಜುವುದಕ್ಕೆ, ಅನಗತ್ಯ ವಿವರಗಳನ್ನು ಒರೆಸಿ ತೆಗೆಯುವುದಕ್ಕಾಗಿ ಉಪಯೋಗಿಸುತ್ತಿದ್ದ!'

ಕಲಾವಿದನ ಸ್ನೇಹಿತನೂ ಹೊರಟು ಹೋದಮೇಲೆ ತುಂಬ ಹೊತ್ತು ಇಸಾಬೆಲ್ಲ ಹಾಗೇ ಕುಳಿತಿದ್ದಳು. ಇಳಿಬಿಸಿಲು ಖಾಲಿಯಾಗತೊಡಗಿದಾಗ ಎದ್ದು ಬೇಕರಿಯ ಬಾಗಿಲಿಳಿಸಿ ಮನೆಯ ಒಳಹೊಕ್ಕು ಕನ್ನಡಿಯ ಮುಂದೆ ನಿಂತಳು, ಅವಳ ಕತ್ತು ನೀಲಿಗಟ್ಟಿತ್ತು. ಉಗುರುನಾಟಿದ್ದ ಕಡೆ ಕೆಂಪಗಿನ ಗಾಯಗಳೂ ಆಗಿದ್ದವು. ನಿಟ್ಟುಸಿರು ಬಿಟ್ಟು ಕಟ್ಟಿದ್ದ ತಲೆಗೂದಲು ಹರವಿಕೊಂಡಳು; ಗಟ್ಟಿಯಾಗಿ ಕಟ್ಟಿಕೊಂಡಿದ್ದ ಸೊಂಟದ ವಸ್ತ್ರವನ್ನು ಬಿಚ್ಚಿದಳು; ಹಾಗೆಯೇ ಅವಳ ಗಮನ ಕನ್ನಡಿಯ ಕೆಳಗಿದ್ದ

ಮಿಶ್ರಣದ ಕೈಪಾತ್ರೆಯೆಡೆಗೆ ಹರಿಯಿತು. ಇಸಾಬೆಲ್ಲ ಮೌನವಾಗಿ ಕೈಪಾತ್ರೆಯನ್ನೊಯ್ದು ಸಿಂಕಿನೊಳಕ್ಕೆ ಸುರಿದು, ನೀರು ಹಾಕಿಟ್ಟಳು, ಹಾಗೂ ಆ ಮಿಶ್ರಣದ ಜಾಡಿಯನ್ನು ಒಂದು ಕಸದ ಬ್ಯಾಗಿನೊಳಕ್ಕೆ ಹಾಕಿ ಲಟ್ಟಣಿಗೆಯಿಂದ ಚಚ್ಚಿ ಒಡೆದು ಹಾಕಿದಳು, ಮತ್ತು ಆ ಬ್ಯಾಗನ್ನೊಯ್ದು ಕಸದ ಬುಟ್ಟಿಯೊಳಕ್ಕೆ ಹಾಕಿಬಂದು ಸಿಂಕಿನಲ್ಲಿ ಕೈ ತೊಳೆದುಕೊಂಡಳು!

---

(ಈ ಕತೆಯನ್ನು ತುಂಬ ಹಿಂದೆ; ತುಂಬ ಹಿಂದೆ ಅಂದರೆ ಅಂದರೆ ನಾನು ಬಹುಶಃ ಇನ್ನೂ ಐದನೇ ಕ್ಲಾಸಿನಲ್ಲಿರುವಾಗಲೇ ಎಲ್ಲೋ ಓದಿದ್ದೆ. ಈ ಕತೆಯ ಲೇಖಕರು (ಬಹುಶಃ ಓ. ಹೆನ್ರಿ ಇರಬಹುದು), ಕತೆಯ ಮೂಲ ಹರಿವು, ಪಾತ್ರಗಳು ಅವುಗಳ ಹೆಸರು, ನಿಜವಾದ ಸನ್ನಿವೇಶಗಳು ಏನೂ ನೆನಪಿನಲ್ಲಿಲ್ಲ. ಆದರೆ ಮೂಲ ಎಳೆಯೊಂದು ನನ್ನ ಮನಸಿನಲ್ಲಿ ಹಾಗೇ ಉಳಿದಿತ್ತು ಸಂಕಷ್ಟದ ಪರಿಸ್ಥಿತಿಯಲ್ಲಿ ಮಾನವ ಸಂಬಂಧಗಳು, ಸಂದಿಗ್ದತೆಯಲ್ಲಿ ಮಾನವ ಮನಸ್ಸುಗಳು ಹುಡುಕಿಕೊಳ್ಳುವ ಹೊರದಾರಿಗಳು, ಕಾಡುವ ಇಸಾಬೆಲ್ಲ ಎಲ್ಲವೂ ಈ ಕತೆಯನ್ನು ನನ್ನ ಮೆಚ್ಚಿನ ಕತೆಗಳಲ್ಲಿ ಒಂದನ್ನಾಗಿಸಿವೆ)